# ಮೈಸೂರ ಗೆಜಿಟ್.

ನಂ. 39.] ಸರ್ಕಾರದಿಂದ ಪ್ರಾಂಯಿಷ್ ಆದ್ದ. [ನಂ. 30.

ಬೆಂಗಳೂರು, ಗುರುವಾರ, ಜುಲೈ ತಾಱ 28, ಸಱ 1904.

## IIನೆ ಭಾಗ.

### ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಜೀಫ್ ಜಡ್ಜ್‌ರು ವಗೈರೆಯವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

**ಫಾರೆಸ್ಟ್ ಇಲಾಖೆ.**

ತಾರೀಖು 6ನೆ ಜುಲೈ 1904, ಚಿಕ್ಕಮಗಳೂರು.

ಇದರಿಂದ ತಿಳಿಸುವದೇನಂದರೆ :—ಕಡೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರ ಆಫೀಸಿನಲ್ಲಿ ಈ ಕೆಳಗೆ ಕಂಡ ತಪಶೀಲ್ ಮೇರೆ ಸಂಬಳ ಮತ್ತು ಭತ್ಯ ಮೊಬಲಗು ಸಹ ಪಾವತಿ ಆಗದೆ ಬಾಕೀಲಿ ಇರುತ್ತೆ. ಈ ನೋಟೀಸು ಥಾಯಿಷ್ ಆದ ಮೂರು ತಿಂಗಳೊಳಗಾಗಿ ಬಾಧ್ಯತೆ ಇರತಕ್ಕವರು ಕಡೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರ ರೂಬರೂಬು ಹಾಜರಾಗಿ ಮೊಬಲಗು ಪಡಿಯಬೇಕು. ಹಾಗೆ ಇಲ್ಲದ ಪಕ್ಷದಲ್ಲಿ ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ :—

| ನಂಬರು. | ಹೆಸರು. | ಹುದ್ದೆ. | ತಪಶೀಲ್. | | | | ಷರಾ. |
|---|---|---|---|---|---|---|---|
| | | | ಸಂಬಳ &c. | | ಮೊಬಲಗು. | | |
| 1 | ರಂಗ | ಗಾರ್ಡ್ | 1901ನೆ ಏಪ್ರಿಲ್ ತಲಬು | .. | 3 6 | 5 | |
| 2 | ಮೈಲಾರೈಯ್ಯ | ಡಿಟೋ | ಡಿಟೋ ಮಾರ್ಚಿ ತಲಬು | | 1 14 | 1 | |
| 3 | ನಾಗಾ | ಡಿಟೋ | ಡಿಟೋ ಜುಲೈ ತಲಬು | .. | 1 7 | 3 | |
| 4 | ಲಿಂಗಂಣ | ಡಿಟೋ | 1902ನೆ ಮೇ ತಲಬು | ... | 1 12 | 11 | |
| 5 | ವೆಸುರ್ಮಾಸಾಬ್ | ಡಿಟೋ | ಡಿಟೋ ಮೇ ತಲಬು | .. | 0 14 | 5 | |
| 6 | ಹನುಮಂತರಾವ್ | ಫಾರೆಸ್ಟರು | 1901ನೆ ಆಗಸ್ಟ್, ಸೆಪ್ಟಂಬರ್ ಭತ್ಯೆ | | 5 12 | 0 | |
| | | | ಡಿಟೋ ಅಕ್ಟೋಬರ್ ತಲಬು | ... | 14 0 | 0 | |
| | | | ಸಾದಿಲ್ವಾರ್ ಮೊಬಲಗು | ... | 0 13 | 0 | |
| | | | ಜುಮ್ಲಾ | ... | 30 0 | 1 | |

**ನೋಟೀಸು.**

ತಾರೀಖು 7ನೆ ಜುಲೈ 1904ನೆ ಇಸವಿ.

1900ನೆ ಇಸವಿ ಫಾರೆಸ್ಟ್ಸ್ ರೆಗ್ಯುಲೇಷನ್ 40ನೆ ಸೆಕ್ಷನ್ ಮೇರೆ ಈ ಕೆಳಗೆ ನಮೂದಿರುವ ಶ್ರೀಹೊನ್ನೆ ನಾಟು ಮಕ್ತಿಕೊಪ್ಪದೆ ಹೊಳೆಯಲ್ಲಿ ತೇಲಿಕೊಂಡು ಬಂದದ್ದು ಕೊಪ್ಪ ರೇಂಜು ಆಫೀಸರವರ ಸುಪರ್ದಿನಲ್ಲಿರುತ್ತೆ. ಇದರ ಹಕ್ಕುದಾರ್ಸು ಯಾರಾದರೂ ಇದ್ದಲ್ಲಿ ಸದರಿ ಮೂರದ ಹಕ್ಕನ್ನು ಸ್ಥಿರಪಡಿಸಿ ಇರತಕ್ಕ ಲಿಖಿತವಾದ ಸ್ಟೇಟುವೆಂಟನ್ನು ಈ ನೋಟೀಸು ಒಂದು ತಿಂಗಳೊಳಗಾಗಿ ಕಡೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರಲ್ಲಿ ಹಾಜರ್ಪಡಿಸತಕ್ಕದ್ದು. ತಪ್ಪಿದಲ್ಲಿ ಸದರಿ ವಾರದ ಬಾಧ್ಯತೆಯು ಯಾವ ಆಟಂಕವೂ ಇಲ್ಲದಂತೆ ಸರಕಾರಕ್ಕೆ ವಶಪಡಿಸಿಕೊಳ್ಳುವದು.

2. ಸದರಿ ನಾಟುವನ್ನು ಸ್ವಾಧೀನಪಡಿಸಿಕೊಳ್ಳಲು ಹಕ್ಕುದಾರರಾಗತಕ್ಕವರು ಸದರಿ ತೊಲೆ ಪತ್ತೆ ಮತ್ತು ಭದ್ರಪಡಿಸಿದ್ದಕ್ಕೆ ತಗಲಿದ ಖರ್ಚಿನ ಲಾಗವಡನ್ನು ಫಾರೆಸ್ಟ್ ಅಧಿಕಾರಿಗಳಿಗೆ ಕೊಡಲು ಬದ್ಧರಾಗಿರುತ್ತಾರೆ :—

| ನಂಬರು. | ಯಾವ ಜಾತಿ ನಾಟು. | ತೊಲೆ ವಿವರ. | ಲಾಂಬಿ. | ಸುತ್ತು. | ಸಲೆ ಅಡಿ. |
|---|---|---|---|---|---|
| 1 | ಶ್ರೀಹೊನ್ನೆ ನಾಟು. | ದುಂಡು ನಾಟು, ಯಾವವಿಧವಾದ ಕಾಂಗಾರಿಯು ನಡದ್ದಿಲ್ಲ ಮತ್ತು ನಂಬರು ವಗ್ಗೈರೆ ನಿಮೂರಿಲ್ಲ, ಸೊಳ್ಳೆಕೈಲಿ ಹತ್ತರ ಮಕ್ತಿಕೊಪ್ಪ ಗ್ರಾಮದಲ್ಲಿ ಬಿದ್ದಿರುತ್ತೆ. | 45 ಅಡಿ | 6' - 3" | 104 |

ಎಂ. ಜಿ ರಾವ್‌ರಾವ್.

ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್, ಕಡೂರು ಡಿಸ್ಟ್ರಿಕ್ಟ್.

## ನೋಟಿಸ.

1904ನೆ ಇಸವಿ ಜುಲೈ 14ನೆ ತಾರೀಖಿನ ಮೈಸೂರು ಗೆಜೆಟ್ಟಿನ 2ನೆ ಭಾಗದ 428—429ನೆ ಪುಟನಲ್ಲಿ ಹಾಸನ ಡಿಸ್ಟ್ರಿಕ್ಟು 1904—05ನೆ ಸಾಲಿನ ಮೈನರ್ ಫಾರಸ್ಟ್ ಪ್ರಾಡ್ಯೂಸ್ ಹರಾಜು ವಿಚಾರದ ನೋಟಿಫಿಕೇಷನ್ ಫಾಯಿಷ್ ಮಾಡಿರುತ್ತೆ ಎಲ್ಲಾ ಜನಗಳಿಗೂ ತಿಳಿಯತಕ್ಕದ್ದು.

ವೈ. ಸೀತಾರಾಮಯ್ಯ,
ಫಾರ್ ಡೆಪ್ಯುಟಿ ಕಮಿಷನರ್, ಹಾಸನದ ಡಿಸ್ಟ್ರಿಕ್ಟು.

## ಇಸ್ತಿಹಾರ್.

ಚಿಕ್ಕಮಗಳೂರು, ತಾರೀಖು 19ನೆ ಜುಲೈ 1904.

ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಈ ಡಿಸ್ಟ್ರಿಕ್ಟಿಗೆ ಶೇರಿದ ಈ ಕೆಳಗೆ ಕಂಡ ತಾಲ್ಲೂಕುಗಳಲ್ಲಿ ಇರುವ (ಸ್ಟೇಟ್ ಫಾರೆಸ್ಟ್ ಮತ್ತು ಪ್ರೊಟೆಕ್ಟೆಡ್ ವಿನಃ) ಹಿಡುವಳೀಲಿಲ್ಲದ ಸರ್ಕಾರಿ ಜಮೀನುಗಳಲ್ಲಿ ಇರತಕ್ಕ ತಂಗಡೀ ಮತ್ತು ಕಕ್ಕೆ ಚೆಕ್ಕೆಯನ್ನು 1904ನೆ ಇಸವಿ ಜುಲೈ ಗುರ್ರೇ ಲಾಗಾಯಿತು 1905ನೆ ಇಸವಿ ಜೂನ್ 30ನೆ ತಾರೀಖು ವರಗೆ ಜವಾಯಿಸಿ ತೆಗದು ಕೊಂಡು ಹೋಗತಕ್ಕ ಸ್ವತಂತ್ರದ ಹಕ್ಕುದಾರಿಯು ಈ ಕೆಳಗೆ ವಿವರಿಸಿ ಇರುವ ತಾರೀಖುಗಳಲ್ಲಿ ಆಯಾಯ ತಾಲ್ಲೂಕ ಅಮಲ್ದಾರ್ರಿಂದ ರೇಂಜಾಫಿಸರಗಳಿಂದನೆ ಹರಾಜು ಮಾಡಿಸಲ್ಪಡುತ್ತ :—

| | ತಾಲ್ಲೂಕ ಹೆಸರು. | ಹರಾಜು ತಾರೀಖು. | ಹರಾಜುಗತಕ್ಕ ಸ್ಥಳ. |
|---|---|---|---|
| 1. | ಚಿಕ್ಕಮಗಳೂರು ... ... | 8—8—04 | ತಾಲ್ಲೂಕ ಕಛೇರಿಲಿ. |
| 2. | ಕಡೂರು ... ... | 10—8—04 | ಡಿಟೋ |
| 3. | ತರೀಕೆರೆ ... ... | 12—8—04 | ಡಿಟೋ |

ಪರಾ—ಹರಾಜು ನಿಬಂಧನೆ ಮುಂತಾದ ತಪಸೀಲ್‌ಗಳನ್ನ ಈ ಬಗ್ಯೆ ಫಾಯಿಷ್ಮಾಡಿಸಿ ಇರುವ ಮೈಸೂರು ಗೆಜೆಟ್ II‌ನೆ ಭಾಗದ 28ನೆ ನಂಬರು 1904ನೆ ಇಸವಿ ಜುಲೈ ತಾರೀಖಿನ 427, 428ನೆ ಪೇಜುಗಳಲ್ಲಿನ ಇಸ್ತಿಹಾರ್ ಮೂಲಕ ತಿಳಿದುಕೊಳ್ಳಬಹುದು.

ಎ. ವೇದಾಂತದೇಸಿಗಂ ಅಯ್ಯಂಗಾರ್,
ಫಾರ್ ಡೆಪ್ಯುಟಿ ಕಮ್ಮಿಷನರ್, ಕಡೂರು ಡಿಸ್ಟ್ರಿಕ್ಟು.

## ಕೋಲಾರ ಡಿಸ್ಟ್ರಿಕ್ಟು.

ತಾರೀಖು 4ನೆ ಜುಲೈ 1904ನೆ ಇಸವಿ.

ಮಾರ್ಜಿನ್ನಲ್ಲಿ ನಮೂದು ಮಾಡಿ ಇರತಕ್ಕ ಇನಾಂ ಗ್ರಾಮಗಳು ಸದರಿ ಇನಾಂ ದಾರ್ರುಗಳಿಂದ ಬರಬೇಕಾದ ಬಾಕಿ ಮೊಬಲಗಿಗೋಸ್ಕರ, ತಾಲ್ಲೂಕು ಅಮಲ್ದಾರ್ರ ಕಛೇರಿಯಲ್ಲಿ 1904ನೆ ಇಸವಿ ಆಗಸ್ಟು ಮಾಹೆ 30ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

1. ಜೋಡಿ ಬೊಮ್ಮೇನಹಳ್ಳಿ ಕಸಬಾ ಹೋಬಳಿ ಚಿಕ್ಕಬಳ್ಳಾಪುರದ ತಾಲ್ಲೂಕು.
2. ಖಾಯಂಗುತ್ತಾ ದಾಸರೇನಹಳ್ಳಿ, ಹೊಸೂರು ಹೋಬಳಿ ಗೋರಿಬಿದನೂರು ತಾ॥

(ಹೆಚ್ಚಿ ತಪಶೀಲ್ ಬಗ್ಯೆ 14—7—1904ನೆ ಮುರ್ತುಂ 28 ನಂಬರ್ ಮೈಸೂರು ಗೆಜೆಟ್ಟಿನ 2ನೆ ಭಾಗದ 430—431ನೆ ನಂಬರ್ ಪೇಜು ನೋಡತಕ್ಕದ್ದು.

ತಾರೀಖು 7ನೆ ಜುಲೈ 1904ನೆ ಇಸವಿ.

ಮಾರ್ಜಿನ್ನಲ್ಲಿ ನಮೂದು ಮಾಡಿ ಇರತಕ್ಕ ಇನಾಂ ಗ್ರಾಮಗಳು, ಸರ್ಕಾರಕ್ಕೆ ಬರಬೇಕಾದ ಬಾಕಿ ಮೊಬಲಗಿಗೋಸ್ಕರವಾಗಿ, ತಾಲ್ಲೂಕು ಅಮಲ್ದಾರ್ರ ಕಛೇರಿಯಲ್ಲಿ 1904ನೆ ಇಸವಿ ಆಗಸ್ಟು ಮಾಹೆ 30ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

1. ಖಾಯಂಗುತ್ತಾ ವೀರೇನಹಳ್ಳಿ-ವೇಮಗಲ್ ಹೋಬಳಿ, ಕೋಲಾರ ತಾಲ್ಲೂಕು.
2. ಜೋಡಿ ಬೆನ್ನಕಹಳ್ಳಿ-ಮಾತಪಾಳ್ಯ ಹೋಬಳಿ, ಬಾಗೇಪಲ್ಲಿ ತಾಲ್ಲೂಕು.

(ಹೆಚ್ಚಿ ತಪಶೀಲ್ ಬಗ್ಯೆ 14—7—1904ನೆ ಮುರ್ತುಂ 28ನೆ ನಂಬರ್ ಮೈಸೂರು ಗೆಜೆಟ್ಟಿನ 2ನೆ ಭಾಗದ 432—433ನೆ ನಂಬರ್ ಪೇಜು ನೋಡತಕ್ಕದ್ದು.